SATYAVADI- An Anglo Kannada Weekly. Published Every Saturday

Reg. No. M-1299

ಸತ್ಯವಾದಿ

ಬಿಡಿ ಪತ್ರಿಕೆ ೬ಪೈ

ವಾರ್ಷಿಕ ಚಂದಾ 1—0—0] ಪ್ರತಿ ಶನಿವಾರ ಪ್ರಕಟಿಸಲ್ಪಡುವುದು. [ಅಂಚೆ ವೆಚ್ಚ ಸಮೇತ 2—0—0

ಸಂಪುಟ 4.] ಮೈಸೂರು, ಶನಿವಾರ, 22ನೇ ಅಕ್ಟೋಬರ್ 1921 [ಸಂಚಿಕೆ 21

ಲೇಖಕರಿಗೆ ಸೂಚನೆ

ಉಪಲೇಖಕರು ಪಡುವ ಅಭಿಪ್ರಾಯಕ್ಕೆ ನಾವು ಉತ್ತರವಾದಿಗಳಲ್ಲವೆಂಬ ವಿಷಯವನ್ನು ಸಕಲರೂ ತಿಳಿಯತಕ್ಕದ್ದು.

ಇತರ ಪತ್ರಿಕೆಗಳಿಗೆ ಕಳುಹಿಸಿದ ಲೇಖನಗಳು ನಮಗೆ ಕಳುಹಿಸಬೇಕಾದ್ದಿಲ್ಲ.

ಆಯಾ ಪತ್ರಿಕೆಯಲ್ಲಿ ಪ್ರಕಟಿಸಲ್ಪಡಬೇಕಾದವಿಷಯಗಳು ಆಯಾ ಶನಿವಾರದ ಹಿಂದಿನ ಬುಧವಾರದೊಳಗೆ ನಮ್ಮ ಕರಗತವಾಗಬೇಕು.

ಉತ್ತಮವಾದ ಹಾಸ್ಯರಸದಿಂದೊಡಗೂಡಿದ ಪ್ರಜಾಕ್ಷೇಮಾಭಿವೃದ್ಧಿ ವಿಷಯವಾದ ಲೇಖನಗಳು ಆದರದಿಂದ ಸ್ವೀಕರಿಸಲ್ಪಡುವುವು.

ನವಯುಗ.

ಪ್ರತಿ ಗುರುವಾರ ಪ್ರಕಟವಾಗುವಾರಪತ್ರಿಕೆ

ಪತ್ರಿಕೆಯು ಸಮರ್ಥ ಲೇಖಕರ ಸಹಕಾರದಿಂದ ನಡೆಯಿಸಲ್ಪಡುವುದು ಮತ್ತು ಇದರಲ್ಲಿ ಸಾರ್ವಜನಿಕ ವಿಷಯಗಳೂ ಸ್ವದೇಶ ಹಿತವಿಚಾರಗಳೂ ನಿರ್ದಾಕ್ಷಿಣ್ಯವಾಗಿಯೂನಿಷ್ಪಕ್ಷಪಾತವಾಗಿಯೂ ಚರ್ಚಿಸಲ್ಪಡುವುವು ವಾರ್ಷಿಕ ಚಂದಾ 2-4-0. ಪರಸ್ಥಳಕ್ಕೆ 3-0-0.

ಜಿಲ್ಲೆಯ ಪ್ರಾಮುಖ್ಯ ಸ್ಥಳಗಳಲ್ಲಿ ಪಾತಮಿದಾರರು ಮತ್ತು ಚಂದಾದಾರರನ್ನು ಒದಗಿಸಿಕೊಡಲಿಕ್ಕೆ ಏಜಂಟರು ಬೇಕು. ಪ್ರಕಟನೆ ದರಗಳ ಮತ್ತು ಏಜಂಟರ ಕಮಿಷನ್ ಕುರಿತು ಕೆಳಗಿನವಿಳಾಸಕ್ಕೆ ಬರಕೊಳ್ಳುವುದು

ಮೇನೇಜರ್ ' ನವಯುಗ ' ಮಂಗಳೂರು.

GOOD SEEDS

As good as can be grown Sow the right kind of seed at the right season and save disappointment. We have just the right kind of seeds for Indian climate— both flower and vegetable.

Beautifully illustrated large descriptive catalogue free on application. (Please mention this paper when writing. Please correspond in English only)

PESTONJEE P. POCHA & SONS

Seed Merchants, POONA.

ಮೊರುತೀ ಅಂಡ್ ಕೋ

ಟಿ. ಕೃಷ್ಣಶಾಸ್ತ್ರಿಗಳ ಆಯುರ್ವೇದೀಯ ಔಷಧಗಳು

1. ಮಾರುತೀ ಅಂಜನ 2. ರೆಂಡ್ ಆಯಿಂಟ್‌ಮೆಂಟ್ 3, ಭೃಂಗಾಮಲಕ ತೈಲ 4. ಬಿಲ್ವಾದಿ ರಸಾಯನ 5. ಅಶ್ವಗಂಧೀ ರಸಾಯನ 6. ಗೋರೋಜನ ಕಸ್ತೂರಿ ಮಾತ್ರೆ ಮೇಲ್ಕಂಡ ಔಷಧಿಗಳು ,, ಮಾರುತೀ ಅಂಡ್ ಕೋ '' ಯವರಲ್ಲಿ ಸಿಕ್ಕುತ್ತವೆ ಕ್ಯಾಟಲಾಗಿಗಿಯಬರೆರಿ ಫ್ರೀಯಾಗಿ ಕಳುಹಿಸುತ್ತೇವೆ ಮತ್ತು ಜಾತಕದ ಫಲಗಳನ್ನು ಬರೆಯುತ್ತೇವೆ ಫೀಜು 10-0-0 ಒಂದು ತಿಂಗಳ ಜಾತಕವನ್ನು ಫ್ರೀಯಾಗಿ ಬರೆದು ಕೊಡುತ್ತೇವೆ ನಂ 1, 8. ಆ ನಂ 2, 8. ಆ ನಂ 3, 1-8-0. ರೂ ನಂ 4, 1-8-0 ರೂ ನಂ 5, 1-8-0 ರೂ ನಂ 6, 4. ಆ

ಮ್ಯಾನೇಜರ್ ಟಿ. ಕೆ. ಸುಬ್ಬಾಶಾಸ್ತ್ರಿ.

ಮಾರುತೀ ಅಂಡ್ ಕೋ ಮೈಸೂರು

ಮೈಸೂರುದೇಶದಲ್ಲಿ ಹೊಸ ಸೃಷ್ಟಿ

ಅತ್ಯುತ್ತಮವಾದ ಲೆದರ್ ಬ್ಯಾಗ್‌ಗಳು ಕಾರ್ಪವಸ್ ಬ್ಯಾಗ್‌ಗಳು ಸೂಟ್ ಕೇಸುಗಳು ನಮ್ಮಲ್ಲಿ ತಯಾರಾಗುತ್ತವೆ. ನಿಮಗೆ ಬೇಕಾದ ಅಳತೆ ಮತ್ತು ನವೂನತೆಯಲ್ಲಿ ತೃಪ್ತಿಕರವಾಗಿ ತಯಾರ್ಮಾಡಿ ಕೊಡುತ್ತೇವೆ. ಕ್ರಯ ಬಹುಸುಲಭ ಅತ್ಯುತ್ತಮಕೆಲಸ. ಅಲ್ಲದೆ ನಮ್ಮಲ್ಲಿ ಪೋಟೋಲಾರ್ಜ್‌ಮೆಂಟ್ ಪೆಯಿಂಟರ್ ಕೆಲಸಗಳು ಉತ್ತಮತರಹ ಸೈನ್ ಬೋರ್ಡ್‌ಗಳು ತಯಾರಾಗುತ್ತದೆ.

ಎ. ಯಕ್. ಸುಬ್ಬರಾವ್ ಆರ್ಟಿಸ್ಟ್ ಅಂಡ್

ಮೆಡಲಿಸ್ಟ್ ಕಲಾಮಂದಿರ ಬೆಂಗಳೂರು

"How to Learn Hindi"

By

Pandit Satyavrata Sidhantalankar

Highly spoken of

By Dr. Subrahmani Iyer

Mr C. Jinarajlas, Mr C. R. Reddy and Swami Shradananda. Send Re 1 at once to Save disappointment, Postage extra.

Secretary ARYASAMAJ

Basavanagudi BANGALORE & MYSORE

ಶುಭೋದಯ

ರಾಜಕೀಯ, ಧಾರ್ಮಿಕ, ಸಾಮಾಜಿಕ ಮೊದಲಾದ ಮಹತ್ವವುಳ್ಳ ವಿಷಯಗಳನ್ನು ನಮ್ಮ ನಾಡಿನ ಭಾಷೆಯಲ್ಲಿ ಚರ್ಚಿಸಿ, ಜನತೆಯಲ್ಲಿ ಜಾಗ್ರತಿಯನ್ನುಂಟುಮಾಡುವದೇ ಈ ಪತ್ರಿಕೆಯ ಮುಖ್ಯೋದ್ದೇಶವು. ಕನ್ನಡ ಭಾಷೆಗೆ ಚಿತ್ತಾಕರ್ಷಕ ಸ್ವರೂಪವನ್ನು ಕೊಟ್ಟು ದೇಶೋನ್ನತಿಯ ವಿಷಯಗಳ ಕಡೆಗೆ ವಾಚಕರ ಲಕ್ಷವನ್ನು ಎಳೆಯುವದಕ್ಕೆ ಯತ್ನಿಸುತ್ತಿರುವದು. ಉಪಯುಕ್ತವಾದ ಎಲ್ಲ ತರದ ಸುದ್ದಿಗಳೂ ಬರುವವು. ಕರ್ನಾಟಕದ ಕಲ್ಯಾಣ ಕ್ಷಾಂಕ್ಷಿಗಳು ಅವಶ್ಯವಾಗಿ ಓದಲೇಬೇಕು. ವಾರ್ಷಿಕಚಂದಾ ಅಂಚೆ ವೆಚ್ಚಸೇರಿ ೩-೧೩-೦

ವಿಳಾಸ:— ಸಂಪಾದಕ, ಶುಭೋದಯ, ಧಾರವಾಡ

ಸಚಿತ್ರ ಲೋಕಬಂಧು

ಧಾರವಾಡದಲ್ಲಿ ಪ್ರತಿ ವಾರವೂ ಹೊಸಪಡತಕ್ಕ ಮೆಲೆ ಬರೆದ ಹೆಸರಿನ ರಾಷ್ಟ್ರೀಯ ಪಕ್ಷದ ಪತ್ರದಲ್ಲಿ ಸದ್ಯಪ್ರಸಂಗದ ನಾನಾಪ್ರಕಾರದ ವಿಷಯಗಳ ಮೇಲಿನ ಚಿತ್ರಗಳು ಕೊಡಲ್ಪಡುವವು. ಕರ್ನಾಟಕದಲ್ಲಿ ಚಿತ್ರಯುಕ್ತವಾದ ಪತ್ರವು ಇದೊಂದೇ. ಈ ಪತ್ರವನ್ನು ಬೈಕಾದಾಗ್ಗೆ ಪ್ರಾರಂಭಿಸಲಿಕ್ಕೆ ಬರುವದು.

ಚಿತ್ರಯುಕ್ತ ಲೋಕಬಂಧು— ವಾ ವರ್ಗಣಿ ೪-೦-೦ ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಿ

ಸಂಪಾದಕ. ಲೋಕಬಂಧು ಧಾರವಾಡ

READY FOR SALE.

The Panjab Atrocities.

BY R, GUNDU RAO.

This littale Book vividly describe the horrors committed by the officialdom in the Panjab recently ; and the historic martyrdom suffered by our Panjab breathern. Every Patriotic Indian should have a copy of this book. Only a few copies ! Price 3 As. Postage Stamps of 4 As. may also be sent.

APPLY TO--THE SATYAVADI OFFICE

MYSORE CITY.

"ಸತ್ಯವಾದಿ"

ಮೈಸೂರು ಶನಿವಾರ 22ನೇ ಅಕ್ಟೋಬರ್ 1921

ಜಸ್ಟಿಸ್ ನಾಗಪ್ಪನವರ ಭಾಷಣ.

ತಾರೀಖು 12 ರಲ್ಲು ನಮ್ಮ ಸಂಸ್ಥಾನದ ಚೀಫ್ ಕೋರ್ಟು ನ್ಯಾಯಾಧೀಶರಾದ ಮ|| ಬಿ. ನಾಗಪ್ಪನವರು ಒಕ್ಕಲಿಗರ ವಿದ್ಯಾರ್ಥಿಗಳ ಸಭೆಯ ಸಭಾಧ್ಯಕ್ಷರಾಗಿ ವಿದ್ಯಾರ್ಥಿಗಳಿಗೆ ಕೆಲವು ಹಿತೋಪದೇಶಗಳನ್ನು ಮಾಡಿದರು. ಇವರು ವಕೀಲರಾಗಿಯೂ ಸರಕಾರದ ಕೆಲಸದಲ್ಲಿಯೂ ಇದ್ದು ಇವೆರಡರ ಸುಖ ಕಷ್ಟಗಳನ್ನು ತಿಳಿದವರಾದುದರಿಂದ ಇವರ ಅಭಿಪ್ರಾಯವು ಸಾಧುವಾದುದೆಂದೂ, ನಿಜವಾದುದೆಂದೂ ಖಂಡಿತವಾಗಿಯೂ ಹೇಳಬಹುದು.

ಈ ಮಹನೀಯರು ಮೊದಲು ಬ್ರಾಹ್ಮಣರನ್ನು ಅನಾದರಣೆಯಿಂದ ಕಾಣುತ್ತಿದ್ದರು. ಮೈಸೂರು ಬಾರ್ ಅಸೋಸಿಯೇಷನ್ನಿನ ಸಭಾಸದರಿಗೆ ಅಸಮಾಧಾನವನ್ನುಂಟುಮಾಡಿದ್ದರು. ಆದರೆ ಇವರಿಗೆ ಚೀಫ್ ಕೋರ್ಟು ನ್ಯಾಯಾಧೀಶ ಕೆಲಸ ಬಂದಂದಿನಿಂದ ಆ ಸ್ಥಾನಕ್ಕೆ ಯೋಗ್ಯವಾದ ಸರ್ವ ಸಮದೃಷ್ಟಿಯನ್ನು ಬಂದುದು ಸಂತೋಷಕರವಾದುದೇ. ಇವರು ತಮ್ಮ ಭಾಷಣದಲ್ಲಿ ಸರ್ವ ಸಮದೃಷ್ಟಿಯನ್ನು ಪ್ರದರ್ಶಿಸಿದರು. ಎಲ್ಲರೂ ತಮ್ಮ ತಮ್ಮ ಕರ್ತವ್ಯಗಳನ್ನು ಮಾಡಬೇಕೆಂದು ಅಭಿಪ್ರಾಯ ಒರುವಂತೆ ಭಾಷಣಮಾಡಿದರು. ಇದು ಸ್ತೋತ್ರಾರ್ಹವಾದುದೇ ಸರಿ. ಇದು ಬ್ರಾಹ್ಮಣರಿಗೂ ಬ್ರಾಹ್ಮಣೇತರ ಹಿಂದುಗಳಿಗೂ ಸರಿಯಾಗಿ ಅನ್ವಯಿಸುವುದು. ದೇಶದ ಅಭ್ಯುದಯವನ್ನೇ ಸರ್ವರೂ ಯೋಚಿಸುವುದಾದರೆ ಇವರ ಮಾತಿನಂತೆ ನಡೆಯಬಹುದು. ಬ್ರಾಹ್ಮಣರು ಈಗ ಸರಕಾರಿ ಕೆಲಸದಲ್ಲಿ ಹೆಚ್ಚಾಗಿದ್ದರೂ ಸ್ವಲ್ಪ ಕಾಲದಲ್ಲಿಯೇ ಇತರರೂ ಮುಂದಕ್ಕೆ ಬಂದರೆ ಅವರೂ ರಾಜ್ಯಭಾರ ಕಾರ್ಯದಲ್ಲಿ ಮಂದಾಳುಗಳಾಗುವರು. ಇದಕ್ಕಾಗಿ ಒಬ್ಬರನ್ನೊಬ್ಬರು ದ್ವೇಷಿಸಬೇಕಾದುದು ಅನವಶ್ಯಕ.

ಮ|| ಬಿ. ನಾಗಪ್ಪನವರು ಹೀಗೆ ಮಾತಾಡಿದುದು 'ಸ್ಟಾರ್' ಪತ್ರಿಕೆಗೆ ಅಸಮಾಧಾನವನ್ನುಂಟುಮಾಡಿದುದು ಆಶ್ಚರ್ಯವೇ, ಈ ಪತ್ರಿಕೆಯಲ್ಲಿ ಮ|| ನಾಗಪ್ಪನವರು ಪ್ರಜಾಮುಖಂಡರಾಗುವುದಕ್ಕೆ ಅನರ್ಹರೆಂಬ ಅರ್ಥ ಬರುವಂತೆ ಬರೆಯಲ್ಪಟ್ಟಿರುವುದು. ಇವರ ಅಭಿಪ್ರಾಯದಲ್ಲಿ ಒಂದು ಪಂಗಡದವರ ಪಕ್ಷವಾಗಿ ಹೋರಾಡುವವರೆ ಪ್ರಜಾಮುಖಂಡರೇನೋ? ಮ|| ನಾಗಪ್ಪನವರು ನಿಜವಾದ ಸರ್ವ ಸಮದೃಷ್ಟಿಯಿಂದ ಈ ವಿಧವಾಗಿ ಹೇಳಿದರೆಂದು ಎಲ್ಲಾ ಒಕ್ಕಲಿಗ ಮಹಾಜನಗಳೂ ನಂಬಿರುತ್ತಾರೆಂದು ತೋರುತ್ತೆ ಇದರ ವಿಷಯದಲ್ಲಿ ಒಕ್ಕಲಿಗರ ಪತ್ರಿಕೆಯ ಅಭಿಪ್ರಾಯವನ್ನು ಎದಿರು ನೋಡಬೇಕು.

ಸೀಸಮಾಲಿಕೆಯು.

—:o:—

ಏನುಕಾಲವುಬಂದುವೊದಗಿತು ಈವಾಗ ಚಾರ್ವಾಕ
ಹೆಚ್ಚಿತು ರಾಜ್ಯದಲ್ಲಿ | ಘನವಾದ ವೇದಶಾಸ್ತ್ರಾಚಾರ
ಮಾಲಿನ್ಯಹೊಂದಿತು ಇಂಗ್ಲೀಷು ವಿದ್ಯೆಯಿಂದ ||

ವರ್ಣಾಶ್ರಮಗಳಲ್ಲಿ ಆದಿಯಿಂದಲಿಬಂದ ಆಚಾರ
ವ್ಯವಹಾರ ಬಿಟ್ಟರೀಗ | ಅನ್ನದಾನದಿತುಂಬಿ ಇದ್ದಂತ
ಮನೆಗಳಲಿ ಹೊಟಲುಯಿಟ್ಟರು ದೇಶವೆಲ್ಲಾ ||

ದಾನಧರ್ಮಾದಿಗಳು ನಡೆಯುತಲಿದ್ದಂಥ ಮನೆಗಳಲಿ
ಭಿಕ್ಷವು ತಪ್ಪಿತೀಗ | ಧನ್ಯತ್ವ ತಪ್ಪಿತು ಮಾನ್ಯತ್ವ ಬಿಟ್ಟಿತು ಗಂಭೀರ ತೊಲಗಿತು ಜನಗಳಲ್ಲಿ ||

ಘನವಾದ ಗೌರವವು ಶಾಂತತ್ವ ಹಾಳಾಯ್ತು ಕುತ್ಸಿತಬುದ್ಧಿಯು ಪ್ರಬಲವಾಯ್ತು | ಬ್ರಾಹ್ಮಣರಲಿನೋಡೆ ವೊಗ್ಗಟ್ಟು ಯಿಲ್ಲದೆ ಕೆಟ್ಟಚಾಳೀಯಿಂದ ಕೆಟ್ಟರವರು ||

ರಾಜತ್ವದಲಿ ನೋಡೆ ದಾನತ್ವದಿಂದಲಿ ಜೀವನಹುಟ್ಟಿತು ಕಾಲಮಹಿಮೆ | ವೈಶ್ಯರ ವಾಣಿಜ್ಯ ಧರ್ಮದಪ್ಪಿತು ಆಶೆಹೆಚ್ಚಿತು ಲುಬ್ಧಪಿಶಾಚಿಯಿಂದ ||

ಶೂದ್ರತ್ವದಲಿ ನೋಡೆ ತಮ್ಮ ಪೂರ್ವಾಚಾರ ಭ್ರಷ್ಟತ್ವದಿಂದಲೀಗ | ಅಂತ್ಯಜಾತಿಯರೆಲ್ಲ ಅಲ್ಪವಿದ್ಯವಕಲಿತು ದೊಡ್ಡಬಾನಿಗಳೆಂದು ತಿಳಿದಿರುವರು ||

ನಾರೀಜನರಿಗೆಲ್ಲ ವಿದ್ಯವು ಹೆಚ್ಚಿತು ಕಾಲಿಗೆ ಮೋಜಾವು ಚೆತ್ರಿ ತಲೆಗೆ | ಕೈಲಿ ಪುಸ್ತಕವಿಟ್ಟು ಬೀದಿಬೀದಿಯಕಡೆಗೆ ಸಂಚಾರಹೊರಟರು ಮಾನಬಿಟ್ಟು ||

ಮಾನವರಿಗೆ ಎಲ್ಲ ಮಹದೇವಿಯಾಗಿರ್ಪ ಬಿಟ್ಟದರಸಿಯುನೋಡಿ ನಗುತಿರುವಳು | ಅನವರತ ಬ್ರಾಹ್ಮಣ ಸಂತರ್ಪಣೆ ಭೂರಿದೇವೋತ್ಸವಾದಿಗಳು ನಡೆದುಬಂದ ||

ಘನವಾದ ವೈಸೂರು ಕರ್ಣಾಟಕಕೆ ಮೃತ್ಯು ಮಿಲ್ಲರಕಮಿಟಿಯು ಎದ್ದುನಿಂತು | ಚಿನ್ನದಹೊಗೆಯು ಏಳುತಲಿದ್ದದೇಶಕೆ ಬೆಲೆಯಿಲ್ಲದಾರತ್ನ ಕಳದುಕೊಂಡು ||

ಕಾಳೆ ಪಾರ್ವತಿ ಚಂಡಿ ಚಾಮುಂಡಿ ದುಷ್ಟನಿಗ್ರಹ
ಮಾಡಿ ಶಿಷ್ಟಪರಿಪಾಲನೆಮಾಡು ಈಗ ||

ವೃತ್ತಾಂತಸಂಗ್ರಹ.

ಧಾರವಾಡ ದೇಶಸೇವಕರ ರಿಲೀಫ ಫಂಡಿನ ಮುದ್ದತ್ತಿಗಾಗಿ ಇಲ್ಲಿಯ ಪಬ್ಲಿಸಿಟಿ ಕಮಿಟಿಯವರು ೫೦ ರೂಪಾಯಿಗಳನ್ನು ಕಳಿಸಿಕೊಟ್ಟಿರುವರು.

ಕುಂಪ್ಟ ಎಂಬ ಊರಿನಲ್ಲಿ ವಿಜಯದಶಮಿ ಹಬ್ಬದ ಬಗ್ಗೆ ಲೋಕಮಾನ್ಯ ಮಹಾತ್ಮಾ ವಗೈರೆ ದೇಶಭಕ್ತರ ಭಾವಚಿತ್ರಗಳನ್ನು ಮೋಟಾರಿನಲ್ಲಿ ಇಟ್ಟು ಸ್ವದೇಶಿನೂಲಿನ ಹೂ ಮಾಲೆಗಳಿಂದ ಶೃಂಗರಿಸಿ 'ವಂದೇಮಾತರಂ' ದೇಶಭಕ್ತರ ಜಯಜಯಾಕಾರದೊಡನೆ ಮೆರವಣಿಗೆ ಆಯಿತು. ಬಹು ಜನಸ್ತೋಮವು ಸ್ವದೇಶಿ ಅರಿವೆಯನ್ನು ಧರಿಸಿತ್ತು. ಹಿಂದು ಮುಸಲ್ಮಾನ ಎಲ್ಲ ಧರ್ಮದವರು ಇದ್ದರು.

ಧಾರವಾಡದ ಗೋಳೀಬಾರಿನ ಪ್ರಕರಣದಲ್ಲಿ ಶಿಕ್ಷೆ ಹೊಂದಿದ ೨೩ ರಾಷ್ಟ್ರಭಕ್ತರನ್ನು ಸ್ಪೆಷಲ್ ಟ್ರೇನಿನ ಮೇಲಿಂದ ಯರವಾಡಾ ಜೈಲಿಗೆ ಒಯ್ದಿರುವರು.

ಚಳ್ಳಕೆರೆ ತಾ|| ನಾಯಕನಹಟ್ಟಿ ಎಂಬ ಗ್ರಾಮದಲ್ಲಿ ಒಬ್ಬ ಹೆಂಗಸು ಕಳೆದ ಸೆಪ್ಟಂಬರ್ ತಿಂಗಳಲ್ಲಿ ಮೂರು ಮಕ್ಕಳನ್ನು ಏಕ ಕಾಲದಲ್ಲಿ ಹೆತ್ತಿರುವುದಾಗಿಯೂ, ಇವುಗಳಲ್ಲಿ ಒಂದು ಮಗುವಿನ ಮುಂಡವು ಹಾವಿನಾಕಾರವಾಗಿಯೂ, ಇನ್ನೊಂದರ ಮುಖವು ಮಂಗನಾಕಾರವಾಗಿಯೂ ಮೂರನೆಯದು ವಿಕಾರವಿಲ್ಲದೆಯೂ ಇರುವುದಾಗಿಯೂ, ಈ ಆಶ್ಚರ್ಯವನ್ನು ನೋಡಲು ನೆರೆಹೊರೆಯ ಗ್ರಾಮಗಳಿಂದ ನೂರಾರು ಜನರು ನಿತ್ಯದಲ್ಲೂ ಬಂದು ಹೋಗುತ್ತಿರುವುದಾಗಿಯೂ ಆ ಗ್ರಾಮಸ್ಥರೊಬ್ಬರು ತಿಳಿಸಿರುತ್ತಾರೆ.

ಸಿಮ್ಲದಲ್ಲಿ ಕೂಡಿದ ರೈಲ್ವೆ ಕಾನ್ಫರೆನ್ಸಿನಲ್ಲಿ ರೈಲ್ವೆ ಸಿಬ್ಬಂದಿಯವರು ಲಂಚ ತೆಗೆದುಕೊಳ್ಳುತ್ತಾರೆಂಬ ಅಪವಾದವು ಜನರು ಹೇಳುವಷ್ಟು ಮಟ್ಟಿಗೆ ನಿಜವಲ್ಲವೆಂದು ಸಭಾಧ್ಯಕ್ಷರು ಪ್ರತಿಪಾದಿಸಿದರು. ಆದರೆ ಸಾಹುಕಾರರು ತಮ್ಮ ಸಾಮಾನುಗಳು ಒಯ್ಯುವಬಗ್ಗೆ ರೈಲ್ವೆ ವೇಗನ್ ಒಂದಕ್ಕೆ 8 ಆಣೆ ಯಾ 1 ರೂಪಾಯಿ ಲಂಚ ಕೊಡುವದು ಮೊದಲೇ ವಾಡಿಕೆಯಾಗಿತ್ತೆಂದೂ, ಇತ್ತೀಚೆಗೆ ರೈಲ್ವೆ ವೇಗನ್‌ಗಳು ಕಡಿಮೆಯಾಗಿ ಈ ಲಂಚದ ಮೊಬಲಗು ಮಿತಿಮೀರಿ ಹೊಗಿದೆಯೆಂದೂ, ಒಂದೇ ವೇಗಿನೆಗೆ 800 ರೂಪಾಯಿ ಲಂಚ ಕೊಟ್ಟ ಒಂದು ದೃಷ್ಟಾಂತ ಕೂಡ ತಮ್ಮ ತಿಳುವಳಿಕೆಗೆ ಬಂದಿದೆಂದೂ ರೈಲ್ವೆ ಕಮಿಟಿಯವರು ತಮ್ಮ ರಿಪೋರ್ಟಿನಲ್ಲಿ ಹೇಳುತ್ತಾರೆ.

1921ನೇ ಇಸವಿ ನವೆಂಬರ್ ತಾರೀಖು 2ರ ಆಗಾಯಿತು ಐದು ದಿವಸಗಳವರಿಗೆ ಕೊಡಗು ಡಿಸ್ಟ್ರಿಕ್ಟ್ ಪ್ರೇಜರ್ ಪೇಟೆಯಲ್ಲಿ ಗಣಪತಿ ದೇವರ ರಥೋತ್ಸವದ ಸಂಬ್ಮಂಧದಲ್ಲಿ ಜಾನುವಾರುಗಳ ಪ್ರದರ್ಶನವು ನಡಿಸಲ್ಪಡುವುದು. ಎತ್ತು, ಹಸು, ಹೋರಿ, ಕರು, ಎಮ್ಮೆ, ಕೋಣ, ಆಡು, ಕುರಿ, ಮೊದಲಾದ ರಾಸುಗಳನ್ನು ಪ್ರದರ್ಶಿಸಬಹುದು. ಅತ್ಯುತ್ತಮವಾದ ರಾಸುಗಳಿಗೆ ಇನಾಮುಗಳು ಕೊಡಲ್ಪಡುವವು ಎಂದು ತಿಳಿಸುತ್ತಾರೆ.

ಮಲಬಾರು ದಂಗೆಕಾರರಿರುವ ಸ್ಥಳಗಳಲ್ಲಿ ಇನ್ನು ಲೂಟಿಯೂ ಮನೆಗಳನ್ನು ಸುಡುವಿಕೆಯೂ ಆಗುತ್ತಿರುವುವೆಂದು ತಿಳಿದು ಬರುತ್ತದೆ. ಮಲಬಾರಿನ ಪೂರ್ಣವಾಸಿಗಳು ಗಲಾಟೆಯನ್ನು ನಿಲ್ಲಿಸಬೇಕೆಂದೂ ದಂಗೆಕಾರರನ್ನು ಶಿಕ್ಷೆಮಾಡಬೇಕೆಂದೂ ವೈಸರಾಯರಿಗೆ ಮನವಿಮಾಡಿಕೊಂಡಿರುತ್ತಾರೆ.

ಪಂಜಾಬಿನಲ್ಲಿ ಮದ್ಯಪಾನ ವ್ಯಾಪಾರವನ್ನು ಕಡಿಮೆ ಮಾಡುವುದಕ್ಕೆ ಅನುಕೂಲವಾದ ನಿರ್ಣಯ ಪಾಸಾಗಿದೆಯೆಂದೂ, ಇನ್ನು ಸದ್ಯದಲ್ಲಿಯೇ ಪಂಜಾಬಿನಲ್ಲಿ ಕುಡಿಕತನವು ನಿಂತು ಹೋಗುವುದೆಂದೂ ತಿಳಿದುಬರುತ್ತದೆ.

ಬ್ರಾಹ್ಮಣ ವಿದ್ಯಾ ಸಹಾಯಸಂಘ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಈಗಿನ ಮೂರು ವರುಷದ ಪತ್ರಿಕೆಗಳ ಬಡಿದಾಟದಿಂದಲೂ ಅಯಾಸ್ಥಳಗಳಲ್ಲಿ ಲೌಕೀಕರು ಆಚರಿಸುತ್ತಿರುವ ಅನಾಚಾರಗಳಿಂದಲೂ ಅದರಲ್ಲಿ ಕೆಲವು ಸ್ಥಳಗಳಲ್ಲಿ ತಮ್ಮನ್ನು ತಮ್ಮ ಜನಗಳೆ ತಮ್ಮ ಅನಾಚಾರದಿಂದಲೆ ಬಲಿದು ದೂರಮಾಡಿರುವದರಿಂದಲೂ ಬಾಲ ಕುಯಿಸಿಕೊಂಡ ನರಿಯು ತನ್ನ ಜೊತೆಗೆ ತನ್ನ ಜಾತಿಯನ್ನೆಲ್ಲ ಒಂದುಮಾಡಿಕೊಳ್ಳುವಂತೆ ವುಸಲಾಯಿಸಿ ಬೋಧಿಸುತ್ತಲೂ ತಮಗೆ ಸರ್ಕಾರದಲ್ಲಿರುವ ಅಧಿಕಾರ ಬಲದಿಂದ ಇತರರನ್ನು ತಮ್ಮ ಪಂಗಡಕ್ಕೆ ಎಳೆಯಲು ವಿಧ ವಿಧವಾದ ಭಯವನ್ನು ಉಂಟುಮಾಡಿ ಸೇರಿಸಿಕೊಳ್ಳುತ್ತಲೂ ಇರುವದರಿಂದ ಸಭೆಗಳಿಗೆ ಪೂರ್ವದಿಂದಲೂ ಇದ್ದಂಕೆ ಹೆಚ್ಚಿಗೆ ವೈದೀಕರು ಸೇರತಕ್ಕದ್ದೇ ಅವಶ್ಯಕವಾಗಿದೆ. ವೈದೀಕರೆಂದರೆ ಯಾರು ಎಂದು ಹೇಳುವದು ಒಂದು ದೊಡ್ಡ ತಂಟೆಯಾಗಿದೆ ಈ ಅನಾಚಾರವು ಅಯಾಯ ಮತದ ಗುರುಗಳು ಇರುವ ಮಠಗಳು ಇರುವ ಸೆರೆ ಬೀದಿಯಲ್ಲಿ ಅನಾಚಾರವೆಂಬ ಹೆಮ್ಮಾರಿಯು ಪ್ರವರ್ತಿಸಿ ಇದ್ದಾಗಲಿ ಆಮಠದ ಬೀದಿಯಲ್ಲಾಗಲಿ ಮಠದ ಒಳಗಾಗಲಿ ಇನ್ನು ಪ್ರವೇತಿಸಿರುವದಿಲ್ಲ ಮತ್ತು ಮಠದಲ್ಲಿ ಸೇವೆ ಮಾಡುವವರಿಗೆ ಈ ಅನಾಚಾರದಸರಗುಸೋಂಕಿದಂತಿಲ್ಲ ಆರೀತಿ ಇಲ್ಲದಿದ್ದರೆ ತಮ್ಮ ಕರ್ತವ್ಯವನ್ನು ಮಾಡದೆ ತಟಸ್ಥರಾಗಿ ಇರುವ ಗುರುಗಳಿಂದ ಶಿಷ್ಯಂದಿರು ಪಡಿಯಬೇಕಾದ ಇಹ ಪರಕ್ಕೆ ಸಾಧಕವಾದ ಬೋಧೆ ಹೊಂದದಿರುವದರಿಂದ ಗುರುಗಳು ಅವಶ್ಯಕವಿಲ್ಲ. ಹತ್ತಾ ಜನಗಳು ಸೇರಿ ಯಾರ ಉದ್ದೇಶದಿಂದ ಅಸ್ಥಿಪಾಸ್ಥಿಗಳು ಕೊಟ್ಟಿರುವರೊ ಅದನ್ನು ಸಹ ಆಯಾಯ ಮತದವರೆ ಕಿತ್ತುಕೊಂಡು ಇಹಲೋಕದ ಸೌಖ್ಯಕ್ಕೆ ಅನುಗುಣವಾದ ಇತರ ಕಾರ್ಯಕ್ಕೆ ಉಪಯೋಗಿಸಿಕೊಳ್ಳುತ್ತಿದ್ದರು. ಗುರುಗಳೆಂದರೆ ಈ ಮತದ ಗುರು ಆ ಮತದ ಗುರು ಎಂದು ಒಬ್ಬರನ್ನು ನಾನು ದ್ವೇಷಿಸುವವನಲ್ಲ ಯಾವ ಮತ ಅಥವ ಮತದ ಗುರುವಾದರು ನನ್ನೆ ಗುರುವೆಂದೇ ಭಾವಿಸುತ್ತೇನೆ. ಇದು ಶಾಸ್ತ್ರೋಕ್ತವಾದ್ದಲ್ಲದೆ ನಾನು ಸ್ವಲ್ಪ ಇಂಗ್ಲೀಷ್ ಓದಿದವನಾದಾಗ್ಯು ನಮ್ಮ ಹಿರಿಯರ ಬೋಧೆ ನನ್ನೆನ್ನು ಅಗ್ನಿಗೆ ಆಹುತಿ ಕೊಟ್ಟಾಗ ನನ್ನ ಕೈತಪ್ಪುವದು. ಈ ಮಾತು ಕಲ್ಪಿತವಾದ್ದಲ್ಲ ಇದು ಕೆಲವರು ಆಡುತ್ತಿರುವದನ್ನು ಕೇಳಿ ಅನಾಚಾರದ ಶಕ್ತಿಯು ಇಲ್ಲಿವರಿಗೆ ವ್ಯಾಪಿಸಿದೆ ಎಂದು ಇನ್ನು ಮುಂದೆ ಹೀಗೆ ಬರಬಹುದೆಂಬುದನ್ನು ಸೂಚಿಸಿದ್ದಕ್ಕಾಗಿ ಎಲ್ಲಾ ಮತದ ಗುರುಗಳನ್ನು ನನ್ನ ಮನಃಪೂರ್ವಕವಾದ ಸಾಷ್ಟಾಂಗವನ್ನು ಇಲ್ಲಿ ಮಾಡಿ ಕ್ಷಮಾಪಣೆ ಕೇಳಿಕೊಳ್ಳುವೆನು.

ಆದ್ದರಿಂದ ಒಟ್ಟು ಮತದ ಹೆಸರು ತೆಗದುಕೊಳ್ಳದೆ ತಮ್ಮ ತಮ್ಮ ಹೆಸರುಗಳು ಬರದು ಅವರ ಸಭೆ ಎಂದರೆ ವಿನಹ ಮತದ ಸಭಾ ಎಂದು ಒಟ್ಟಿಗೆ ನಾಮಾಂಕಿತವ ಇಟ್ಟಲ್ಲಿ ಗುರುಗಳು ಅಥವ ಅವರ ಸಮೀಪದಲ್ಲಿ ರುವ ಸಾಂಗವಾಗಿ ಮತಗ್ರಂಥಗಳನ್ನು ವ್ಯಾಸಂಗಮಾಡಿರುವ ಶಿಷ್ಯಂರು ಅಥವ ಇತರ ಸ್ಥಳಗಳಲ್ಲಿ ತಮ್ಮ ಮತಗ್ರಂಥಗಳಲ್ಲಿ ಪಾಂಡಿತ್ಯವನ್ನು ಹೊಂದಿ ತಮ್ಮ ಮತದ ಗುರುಗಳಿಂದ ವರ್ಯಾದೆಹೊಂದಿದವರು ಅಥವಾ ಆಯಾ ಮತದ ಕ್ರಮಾನುಸಾರವಾಗಿ ಆಚಾರ ಶೀಲರಾಗಿರುವದಾಗಿ ಹೆಳರು ಹೊಂದಿದವರು ಇವರುಗಳೆ ವೈದೀಕರು ಪ್ರತಿಮತದ ಸಭೆಯಲ್ಲಿಯು ಈಗಿನ ಸ್ಥಿತಿಯಲ್ಲಿ ಮತಗಳ ಏಳಿಗೆಗೆ ಈ ವೈದೀಕರ ಹೆಚ್ಚಿಗೆ ಸೇರಜೇಕಾಗಿದೆ ಹಾಗೆ ಪರಸ್ಥಳಕ್ಕೆ ಹೋಗಲು ಅನಾನುಕೂಲವಾದಲ್ಲಿ ತಮ್ಮ ಉದ್ದೇಶ ಮತ್ತು ಅಭಿವ್ರಾಯವನ್ನು ಅಖಿತಮೂಲ್ಯವಾದರು ಸಭಾಧ್ಯಕ್ಷರಿಗೆ ತೀಸುವದು ಯುಕ್ತವಾಗಿ ತೋರುತ್ತೆ.

ಹೀಗೆ ಹೇಳುವಲ್ಲಿ ಲೌಕೀಕರನ್ನು ಬಿಡಬೇಕೆಂದು ಹೇಳಿದಂತೆ ಯಾರೂ ಭಾವಿಸಬಾರೆದು ಅವರಲ್ಲಿ ಹೆಚ್ಚಿಗೆ ಇಹಪರ ಜ್ಞಾನವುಳ್ಳವರಾಗಿಯು ವ್ಯವಹಾರದಲ್ಲಿ ಆಚಾರ ಶೀಲರಾಗಿಯು ಪ್ರಜೆಗಳಲ್ಲಿ ಮತಭೇದವೂ ದ್ವೇಷವೂ ಇಲ್ಲದೆ ಎಲ್ಲರನ್ನು ಸಮದೃಷ್ಟಿಯಿಂದನೋಡುತ್ತಾ ಅವರ ಹಿತಕ್ಕಾಗಿ ಯಾವಕಷ್ಟವನ್ನಾದರು ಸಹಿಸಲು ಸಿದ್ಧವಾಗಿರುವವರು ಅನೇಕರಿದ್ದಾರೆ ಇಂಥವರನ್ನು ಬಿಡಬೇಕೆಂದು ಹೇಳಿದಂತಾಗುವದಿಲ್ಲ ಮೊದಲು ಹೇಳಿದಂತೆ ಪ್ರತಿಮತದ ಸಭೆಯಲ್ಲು ಆ ಮತದ ವೈದೀಕ ಲೌಕೀಕ ಮಂಡಲಿಯವರು ಸೇರಿದ ಹೊರ್ತು ಮತದ ಸಭೆಯೆಂದು ಕರಿಯಲು ಸಿದ್ಧಿಸುವದಿಲ್ಲವೆಂತಲು ಒಂದು ಪಂಗಡವು ಸೇರಿದಲ್ಲಿ ಏಕಪಕ್ಷವಾಗುವದರಿಂದ ಅಂಥ ಸಭೆಯಿಂದ ಆ ಮತಸ್ಥರಿಗಾಗಲಿ ಇತರರಿಗಾಗಲಿ ಯಾವ ಪ್ರಯೋಜನವು ಆಗಲಾರದೆಂದೂ ಅನೇಕರು ಹೇಳುವದನ್ನು ನಾವೂ ನ್ಯಾಯವಾಗಿ ಅನುಮೋದಿಸಲೇಬೇಕಾಗಿದೆ.

ಈ ವಿಪ್ರರು ಯಾವತ್ತೂ ವೇದದಿಂದ ಅನುಸರಿಸಿಕೊಂಡು ವೇದವನ್ನು ಆವಲಂಬಿಸುವ ಮತಗಳಿಗೆ ಹೇಳಿದ್ದಾಗಿದೆಯಾಗಿ ಅವುಗಳಿಗೆ ಮಾತೃಸ್ಥಾನವಾದ ಸಂಸ್ಕೃತ ವಿದ್ಯಾಭ್ಯಾಸದ ಸಹಾಯವೇ ಮೊದಲುಮಾಡಬೇಕು. ಇದಕ್ಕಾಗಿ ಸರ್ಕಾರಿ ಸ್ಕೂಲುಗಳಲ್ಲಿ ಸಂಸ್ಕೃತ ವಿದ್ಯಾಭ್ಯಾಸವನ್ನೇ ಇಂಗ್ಲೀಷಿನ ಜೊತೆಯಲ್ಲಿ ಬಲಾತ್ಕಾರವಾಗಿ ಬೋಧಿಸಬೇಕೆಂತಲೂ ಅದರಲ್ಲು ಮಿಷಕ್ ಸ್ಕೂಲುಗಳಲ್ಲಿ ಬೈಬಲ್ ಯಂಬ ಕ್ರಿಸ್ತರ ವೇದವನ್ನು ಬಲಾತ್ಕಾರವಾಗಿಟ್ಟಿರುವಂತೆ ವೇದವೇ ಮೊದಲಾವ ಮತಗ್ರಂಥಗಳನ್ನೇ ತರಗತಿಗನುಸಾರವಾಗಿ ಓದಿಸಬೇಕೆಂತಲು ತಾತ್ಕಾಲಕ್ಕೆ ಬೆಂಗಳೂರು ಮೈಸೂರುಗಳಲ್ಲಿ ಸಂಸ್ಕೃತ ಪಾಠಶಾಲೆಗಳಲ್ಲಿ ತೇರ್ಗಡೆ ಹೊಂದಿ ವೇತನಗಳನ್ನು ಹೊಂದಿರುವರನ್ನೇ ಉಪಾಧ್ಯಾಯರನ್ನಾಗಿ ನೇಮಕಮಾಡಿಕೊಡಬೇಕೆಂತಲು ಮೊದಲು ಶ್ರೀಮತ್ ಮಹಾರಾಜರವರಿಗೆ ಪ್ರಾರ್ಥಿಸಿಕೊಂಡು ಅದಕ್ಕೆ ಹೆಚ್ಚಿಗೆ ಬೇಕಾದ ಸಹಾಯವನ್ನು ಈ ಬ್ರಾಹ್ಮಣ ವಿದ್ಯಾಭ್ಯಾಸದ ಸಂಘದ ಉತ್ಪತ್ತಿಯಿಂದ ಒದಗಿಸಿಕೊಡುವದು ಯುಕ್ತವಾಗಿ ತೋರುತ್ತೆ.

ವೇದವನ್ನು ಅನುಸರಿಸದಿರುವ ಇತರ ಮತಸ್ಥರಿಗೂ ಇದೇರೀತಿ ಹೇಳಬೇಕಾಗಿದೆ. ಆಯಾ ಮತದ ಆಚಾರ ಪುರುಷರೆ ಆಗಲಿ ಅಥವ ಆಯಾಯಮತದ ಇಹ ಪರಕ್ಕೆ ಸಾಧಕವಾದ ಪೂರ್ವಸಂಪ್ರದಾಯ ಆಚಾರವನ್ನು ಚೆನ್ನಾಗಿ ತಿಳಿದು ಯಜಮಾನಿಕೆಯನ್ನು ಪಡೆದು ಇರುವ ಮುಖ್ಯಸ್ಥರು ಸೇರಿಕೊಂಡು ಆಮತದ ಹೆಸರಿನಿಂದ ಮೀಟಿಂಗುಮಾಡಿಕೊಂಡು ತಮಗೂ ತಮ್ಮ ಮಕ್ಕಳಿಗೂ ಏಳಿಗೆಯಾಗುವ ವಿಷಾರ್ಡಿಗಾಗಿ ಸಭಾಸೇರಿಸಿಕೊಂಡರೆ ಉತ್ತಮವೇ ವಿನಹ ಕೇವಲ ಲೌಕೀಕ ಮಂಡಲಿಯೇ ಸೇರಿದ್ದಲ್ಲಿ ಏಕಪಕ್ಷ ಸಭಾ ಸೇರಿಸಿಕೊಂಡರೂ ಮೀಟಿಂಗುಗಳು ಮಾಡಿಕೊಂಡರೂ ಸಮುದಾಯವಾಗಿ ಆ ಮತದ ಮೀಟಿಂಗು ಎಂದು ನಾಮಕರಣ ಮಾಡಿಕೊಂಡರೆ ಆಬಿರದು ಅದಕ್ಕೆ ಎಂದಿಗೂ ಸಲ್ಲಲಾರದು. ಆಯಾಯ ಮತಸ್ಥರೇ ಒಪ್ಪುವದಿಲ್ಲ ಈಗ ಹುಟ್ಟಿರುವನೇಕ ಮೀಟಿಂಗುಗಳು ಮಾಲಿನ್ಯವಾಗಿ ಮತಪದ್ಧತಿಯನ್ನು ಮೀರಿ ಅನಾಚಾರಕ್ಕೆ ಸರ್ವಮತದಲ್ಲು ಅನೇಕರು ಸೇರಿಕೊಂಡು ನಮ್ಮ ಸೃಷ್ಟಿಕರ್ತನನ್ನು ಮರತು ನಮ್ಮ ಮೇಲೆ ಮತ್ಯಾವ ಅಧಿಕಾರಿಯು ಇರುವದಿಲ್ಲವೆಂದು ಸೃಷ್ಟಿ, ಸೂರ್ಯ ಚಂದ್ರ, ಸಮುದ್ರ, ಹಗಲು, ರಾತ್ರಿ, ನಾವೇಕಲ್ಪಿಸಿರುತ್ತೀವೆಂದು ಕಥೆ ಮತ್ತು ಪುರಾಣ ಶಾಸ್ತ್ರಗಳಲ್ಲಿ ಕೇಳುವ ರಾಕ್ಷಸರು ಮತ್ತು ಸಿಹ್ಮ ಹುಲಿ ಚರತೆ ಮುಂತಾದ ಕಾಡು ಮೃಗಗಳಂತೆ ಸೆರೆಯವರಾದ ಅಥವ ಒಂದು ದೇಶದವರನ್ನು ಬಾಧಿಸುತ್ತಿರುವದರಿಂದ ಅಲ್ಲವೇ ಈ ಸಕಲ ಮೂಲವಸ್ತುಗಳಿಗೂ ಬ್ರಹ್ಮ ವಿಷ್ಣು ಮಹೇಶ್ವರರೆಂಬರ ಸರ್ವಶಕ್ತಿ ಮತ್ತು ಜಾಲವನ್ನು ಪ್ರಸಿದ್ಧಪಡಿಸಿ ತೋರಿಸುತ್ತಿರುವ ಸಾಕ್ಷಾತ್ ಭಗವಂತನಲ್ಲವೇ. ಇಂತಪ ಭಗವಂತನೆಂದ ವೇಲೆ ಅಧಿಕಾರಿಯಾಗಿಯು ಶಿಕ್ಷಾರಕ್ಷಣಕ್ಕೆ ಮೂಲ ಕಾರಣನಾದ ಸರ್ವ ಚೈತನ್ಯವಂತನಾದ ಒಂದು ಶಕ್ತಿ (ಭಗವಂತನೆಂಬ) ನಮ್ಮನ್ನು ಆಳುತ್ತಿದೆಯೆಂದು ಅರಿಯಬೇಕಾದರೆ ಮತಜ್ಞಾನವಿದ್ದರಲ್ಲವೇ ಅವನನ್ನು ಆರಾಧಿಸಿ ಪೆದರಿಕೆಯಿಂದ ಸನ್ಮಾರ್ಗದಲ್ಲಿ ನಡಿಯತಕ್ಕದ್ದು ಎಲ್ಲಾ ಮತದಲ್ಲಿ ಈ ಸರ್ವಶಕ್ತಿವುಳ್ಳ ಒಂದು ವ್ಯಕ್ತಿ ಇರುತ್ತೆಂದು ಹೇಳುತ್ತಿರುವಲ್ಲಿ ಆಯಾಯ ಮತದ ಕಟ್ಟು ಅನುಸರಿಸಿಕೊಂಡು ನಡದರಲ್ಲವೇ ಭಗವಂತನ ಜ್ಞಾನಹುಟ್ಟುವದು ಈ ಜ್ಞಾನವಿದ್ದಲ್ಲಿ ಯಾವ ಮತಸ್ಥರಿಂದಲೆ ಆಗಲಿ ಪರಮತಸ್ತರಿಗೆ ಆಗಲೀ ಪುರಜನಕ್ಕೆ ಆಗಲೀ ಯಾವ ಹಿಂಸೆ ಅಥವ ಸಂಕಟವು ಪ್ರಾಪ್ತವಾಗುವದಿಲ್ಲ. ಮತವನ್ನು ಅನುಸರಿಸಿಕೊಂಡು ಭಗವಂತನಿಧಾನೆಂದು ಹೆದರದೇ ಇರುವವನು ದೆವ್ವಕ್ಕು ಕಾಡು ಮೃಗಗಳಿಗೂ ಸಮಾನನಾಗಿ ಪ್ರಜೆಗಳಿಗೆ ಹಿಂಸೆಯನ್ನು ಉಂಟುಮಾಡುವದಲ್ಲದೇ ಮತ್ತೇನು ಮಾಡ್ಯಾನು? ಅಂಥವನು ಮನುಷ್ಯರಿರುವ ಎಡೆಯಲ್ಲಿ ನಿಲ್ಲಗೊಡಿಸುವದೇ ಅಪಾಯವಲ್ಲವೇ?

ಇದಕ್ಕಾಗಿ ನಾವು ಸೂಚಿಸುವದೇನಂದರೆ ಯಾವ ಮೀಟಿಂಗು ಮಾಡಿದಾಗ್ಯು ಕೇವಲ ಸ್ವಾರ್ಥಕ್ಕಾಗಿ ದ್ರವ್ಯಸಂಪಾದಿಸಲು ತಕ್ಕ ಏರ್ಪಾಡುಗಾಗಿ ಸಲಹೆಯನ್ನು ಕೊಟ್ಟುಕೊಂಡು ತಮ್ಮ ಇಷ್ಟಾನುಸಾರವಾಗಿ

ಕೆಜೊಲ್ಯೂಷನ್ಗಳು ಅಂದರೆ ವಜ್ರಸಂಕಲ್ಪಗಳನ್ನು ಠರಾವು ಮಾಡುವದೂ ಅದಕ್ಕೆ ಆ ಮತಸ್ಥರೆಲ್ಲರೂ ಒಪ್ಪಿರುತ್ತಾರೆನ್ನುವದೂ ಇವೆರಡು ಪ್ರಜೆಗಳಿಗೆ ಈಗ ಉಂಟಾಗಿರುವ ಅನರ್ಥಕ್ಕೆ ಹೆಚ್ಚಿನ ಸಂಕಲ್ಪಕ್ಕೆ ಕಾರಣವಾಗುವುದೆಂದು ಸರ್ವ ಮತಸ್ಥರು ಯೋಚಿಸತಕ್ಕದ್ದಾಗಿದೆ.

ಬ್ರಾಹ್ಮಣ ನಿಷ್ಪಕ್ಷಪಾತಿ.

ಆಂಗ್ಲ ಜನರು ನಿರ್ಮಿಸಲಾರದ ಕೆಲವು ರಂಗುಗಳನ್ನು ಈಗ ಜರ್ಮನರ ಒಂದು ಸಂಘದವರು ನಿರ್ಮಾಣಮಾಡಿದ್ದಾರೆ. ಅದು ರೇಶ್ಮೆಗೆ ಬಣ್ಣಕಟ್ಟಲು ಉಪಯೋಗಿಸತಕ್ಕದು. ಅದರ ಬೆಲೆಯನ್ನು ೧ಕ್ಕೆ ಮೂರು ಮಾಡಿದ್ದಾರೆ. ಯುದ್ಧಕ್ಕೆ ಮುಂಚೆ ಇದ್ದ ಬೆಲೆಗೆ ಇದು ೧೨ ರವ್ಹಾಗಿದೆ.

ರವ್ಹಾದಲ್ಲಿ ಈಗ ಕ್ಷಾಮಪೀಡಿತರಾಗಿರತಕ್ಕ ಜನರಿಗೆಲ್ಲಾ ದಿನಕ್ಕೆ ಒಬ್ಬೊಬ್ಬರಿಗೆ ಒಂದೊಂದು ಪೌಸು ರೊಟ್ಟಿಯಂತೆ ಕೊಟ್ಟರೂ ದಿವಸ ೧ಕ್ಕೆ ೧೦ ಲಕ್ಷ ಡಿಾಲರ್ ವೆಚ್ಚವು ಹಿಡಿಯುವುದಂತೆ. ಎಷ್ಟು ಸಹಾಯ ಮಾಡಿದರೂ ಈಗಣ ಕ್ಷಾಮದಿಂದ ೨೦ ಲಕ್ಷ ರಷ್ಯನ್ನರು ಆಹಾರವಿಲ್ಲದೆ ಸಾಯುವುದು ಸಿದ್ಧವೆಂದು ಅಮೇರಿಕಾ ರೆಡ್‌ಕ್ರಾಸ್ ಸಂಘದ ಕಮಿಷನರು ಪ್ರಕಟಿಸಿದ್ದಾರೆ.

ದಕ್ಷಿಣ ಅಮೇರಿಕಾದಲ್ಲಿರುವ ಚಿಲ್ಲಿ ರಾಷ್ಟ್ರಕ್ಕೆ ಸೇರಿದ ಒಂದು ಪಟ್ಟಣದಲ್ಲಿ ಮಕಾಪಿ ಎಂಬ ಕೋಟೀಶ್ವರನು ಒಂದು ದೊಡ್ಡ ದುರ್ಬೀನನ್ನು ನಿರ್ಮಿಸುವುದಕ್ಕೆ ಪ್ರಯತ್ನಿಸಿದ್ದಾನೆ. ಹಾರ್ವರ್ಡ್ ವಿಶ್ವವಿದ್ಯಾಲಯದ ಶಾಸ್ತ್ರಜ್ಞರಾದ ಪ್ರೊ|| ಟಾಡ್‌ರವರು ಇವರಿಗೆ ಸಹಾಯ ಮಾಡುತ್ತಿದ್ದಾರೆ. ಈ ದುರ್ಬೀನನ್ನು ರಚಿಸುವುದಕ್ಕೆ ೩ ವರ್ಷ ಕಾಲ ಹಿಡಿಯುವುದು. ಇದರಿಂದ ಖಗೋಳವನ್ನು ನೋಡಿದರೆ ಅಂಗಾರಕ ಗ್ರಹವು ಭೂಮಿಗೆ ೧|| ಮೈಲಿಯ ದೂರದಲ್ಲಿರುವಂತೆ ಕಾಣುವುದು ಅಂಗಾರಕ ಗ್ರಹದಲ್ಲಿ ಮನುಷ್ಯ ಸಂಚಾರವು ಇರುವುದನ್ನೂ ಇಲ್ಲದಿರುವುದನ್ನೂ ಅಲ್ಲಿನವರ ನಾಗರಕತಾದಿಗಳನ್ನೂ ಕಂಡುಹಿಡಿಯುವುದಕ್ಕೆ ಇದು ವಿಶೇಷಸಾಧಕವಾಗುವದೆಂದು ನಿರೀಕ್ಷಿಸಲ್ಪಟ್ಟಿದೆ.

VIJAYA DASAMI –WHAT IT MEANS

Prof. R. G. Rao.

I am writing this article on the famous Vijayadasami day. I feel the occasion is most propitious for ventilating some of my own thoughts. Vijayadasami is a day celebrated all over India. Its origin is very interesting to trace. As the name implies, it is vitally connected with conqnest and victory—conquest of and victory over all evil influences and individuals. It was on this day that Goddess Durgi killed the demon Mahisasura, It marks the end of the rainy season and the beginning of conquest. In days long gone by our noble ancestors used to march out of their towns to make conquests abroad, to crush the enemies, to quell rebels and to restore peace all over the country. They generally returned in triumph on Jeshta ekadasi (ಜ್ಯೇಷ್ಠ ಏಕಾದಶಿ) or Vaisakhe Thadige(ವೈಶಾಖತದಿಗೆ)after a period of nearly eight months. This was the custom of our warlike ancestors.

But we have simply been imitating in our own way what our own forefathers actully performed. We have preserved it in a certain form and forgotten the spirit of it. On this day, people take their food early in the evening and proceed with their pockets stuffed in with the leaves of a tree called Sonu(ಸೋನು)to serve in place of gold of former times. These leaves are offerd to elders met on the way and blessings are received in return. Thus people go to a temple outside the city, offer their prayers and return as if in triumph.

How opportune the present is to revive that noble spirit that our ancestors nobly bore! We have excellent work before us, a work of conquest and nothing short of it. We have to fight out the battle of non-co-operation to a successful close. Let us start out, all of us, even as our ancestors did, with a determination to succeed or perish in the attempt to eradicate all evil and satanic influences and promote our country's good, if we have not already made a beginning If the beginning is already made, let us continue with tenfold energy to make it a success. Every one who is anxious to prove a worthy descendant of his noble ancestors will readily realise his duty at this most trying moment.

What is the work that we have immediately before us? Surely the Boycott Programme. & Picketing must be conducted persistently patiently and with redoubled vigour in every state, town, and village. This should mark the beginning of our conquest and if this becomes an accomplished fact before October 31st, then we will be qualified for further successes. Without this further programme of non-co-operation cannot be effectively pursued. This is therefore the first condition to be satisfied. Then the next condition is to affirm the Karachi Resolution even from the housetops Not a soul should hesitate to do so. It is our inherent right that is exercised in that resolution. The Ali brothers have been put on trial for passing a resolution which is the duty of every citizen to perform. The idea of the India Government in prosecuting the Ali brothers is to terrorise the people and nip all our aspirations in the bud. As a protest against this attempt of the Government to hold India under subjection by means of the army and the police. the people must re-affirm their confidence in the arrested leaders and cling to the resolution for which they are hauled up. Let the Government make us a nation of prisoners and India a huge prison-house Our success in this behalf consists in much bold and solid work. We know how we worked for enlistting members for the congress committee. We must work ten times more vigorously to enlist signatories for the Boycott programme as well as for the Karachi Resolution. In defence of the common objection that the whole country cannot be clothed in Khaddar people must simplify their dress. Let this be done so far as it is compatible with one's comfort. I know many men who wear bunyan, a shirt, a waist coat etc. sure it is they do not feel comfortable with all that. They do it merely to keep up appearance or to please those whose pleasure is calculated to promote their interests. Is it not madness to please a capricious person at the sacrifice of our comfort? "to sell our freedom for a mess of potage?" Much of this elaborate paraphermalia of dress is mere superfuty. In India we do not require more than a single shirt and a dhoti or loin cloth for nearly nine months in the year. Especially in Mysore to which I make a particular reference, it being my native province and where severe writer is unheard of, one can manage with a shirt and a dhoti for all the twelve months in the year. We know our raiyats do not wear more than a loin-cloth mostly above the knees. If all could be content in the simple dress, then the problem of clothing the country in Khaddar becomes nothing. Coats, waistcoats and other superfluities are not indigenous. They are imposed upon us as a disparagement to our national dress. No Indian can, consistently with his national self-respect and dignity of which he is a repository, can (i) wear foreign cloth (ii) imitate foreign manners, customs and modes of dress.

Let the congress committee, khilafat Association, National Union, social service leagues Mahila. Seva Samaja, all take up this work. Success shall undoubtedly be ours.

Printed and Published by Mr. M. S. Krishna Rao, at the *Satyavadi* Press Yelwal Road, Sivarampet, Mysore.